ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1355
ಸದಸ್ಯರ ಹೆಸರು	ಶ್ರೀ ಎನ್ ರವಿಕುಮಾರ್
ಉತ್ತರಿಸುವ ದಿನಾಂಕ	09-03-2022
ಉತ್ತರಿಸುವವರು	ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದೇಗುಲ ಪ್ರವಾಸೋದ್ಯಮ ಕುರಿತು ಸರ್ಕಾರ ಯಾವ ರೀತಿಯ ಯೋಜನೆಗಳನ್ನು ಹಮ್ಮಿಕೊಂಡಿದೆ (ವಿವರ ನೀಡುವುದು)	ದೇಗುಲ ಪ್ರವಾಸೋದ್ಯಮ ಕುರಿತಂತೆ ಧಾರ್ಮಿಕ ದತ್ತಿ ಇಲಾಖೆಯಡಿ ದೈವ ಸಂಕಲ್ಪ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಪ್ರಥಮ ಹಂತವಾಗಿ ಗ್ರೂಪ್ 'ಎ' ಶ್ರೇಣಿಯ 25 ದೇವಾಲಯಗಳನ್ನು ಗುರುತಿಸಿ ಆಯಾಯ ದೇವಾಲಯಗಳಿಂದ ಬರುದ ಆದಾಯದಿಂದ ದೇವಾಲಯಗಳಲ್ಲಿ ಯೋಜಿತ ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಕಂಇ 107 ಮುಅಬಿ 2022 ದಿನಾಂಕ:22.02.2022ರಲ್ಲಿ ಸರ್ಕಾರವು ದೈವ ಸಂಕಲ್ಪ ಯೋಜನೆಯನ್ನು ಹಮ್ಮಿಕೊಂಡಿರುತ್ತದೆ. ಯೋಜನೆಯ ಅಂಶಗಳು ಕೆಳಕಂಡಂತಿದೆ. 1. ಯೋಜನೆಯ ಗುರಿ. 2. ಯೋಜನೆಯ ತಂತ್ರ 3. ದೇವಾಲಯಗಳ ಅಭಿವೃದ್ಧಿ **ಹಂತ-1** ಮಾಸ್ಟರ್ ಪ್ಲಾನ್‌ಗಳ ತಯಾರಿ, ಮಾಸ್ಟರ್ ಪ್ಲಾನ್‌ಗಳ ತಯಾರಿಗಾಗಿ ಮಾರ್ಗಸೂಚಿ. ಅಳವಡಿಸಲಾದ ಮಾಸ್ಟರ್ ಪ್ಲಾನ್ ಹಾಗೂ ವಿನ್ಯಾಸದ ರೂಪ ರೇಖೆಗಳ ವಿವರ **ಹಂತ-2** ಅಂದಾಜು ಪಟ್ಟಿ ತಯಾರಿಕೆ. **ಹಂತ -3** ಕಾಮಗಾರಿಯ ಕಾರ್ಯ ರೂಪ **ಹಂತ -4** ಅನುಮೋದನೆ ಮತ್ತು ಅನುಷ್ಠಾನ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳ ಸಂಪೂರ್ಣ ಮಾಹಿತಿಯನ್ನು ಒದಗಿಸಲು ಮತ್ತು ಆನ್ ಲೈನ್ ಮೂಲಕ ಭಕ್ತಾಧಿಗಳಿಗೆ/ ಸಾರ್ವಜನಿಕರಿಗೆ ಸೇವೆಗಳನ್ನು ಮುಂಗಡವಾಗಿ ಕಾಯ್ದಿರಿಸುವ ವ್ಯವಸ್ಥೆಯನ್ನು ಒದಗಿಸುವ ಹಿತದೃಷ್ಟಿಯಿಂದ NIC

......2